# ಸಂಗೀತ ಸರಸ್ಸಿನ ಸೌಗಂಧಿಕಾ ಪುಷ್ಪ



ನಾದಲೋಲ ಭೀಮಸೇನ ಜೋಶಿ 100

4.2.1922 – 24.1.2011

**ಹಿಂದೂಸ್ತಾನಿ ಸಂಗೀತದಲ್ಲಿ ಭೀಮಸೇನ ಜೋಶಿ ಅವರದು ಅಕ್ಷರಶಃ ‘ಭೀಮ ಹೆಜ್ಜೆ’. ಅವರಷ್ಟು ಖ್ಯಾತಿ, ಜನಪ್ರೀತಿ ಪಡೆದ ಸಂಗೀತ ವಿದ್ವಾಂಸರು ಯಾವ ಕಾಲದಲ್ಲೂ ಅಪರೂಪ. ಹಾಡಲಿಕ್ಕೆ ಹುಟ್ಟಿದವರಂತೆ ನಾದದೇವತೆಯ ಉಪಾಸನೆಯಲ್ಲಿ ತೊಡಗಿಕೊಂಡಿದ್ದ ಅವರು, ಹಾಡುಗಾರಿಕೆಗೆ ಹೊಸ ಹೊಳಪನ್ನು ಹಾಗೂ ತಾನು ಬದುಕಿದ ಕಾಲದ ತೀವ್ರತೆಯನ್ನು ತಂದುಕೊಟ್ಟ ಹಾಡುಗಾರ. ಈ ಅಪ್ರತಿಮ ಕಲೆಗಾರನ ಜನ್ಮ ಶತಮಾನೋತ್ಸವ ಸಂಭ್ರಮ ಫೆ. 4ರಿಂದ ಆರಂಭ.**

**■ ಶೈಲಜ ಮತ್ತು ಟಿ.ಎಸ್. ವೇಣುಗೋಪಾಲ್**

ಸಾಮಾನ್ಯವಾಗಿ ‘ಪ್ರಯಾಣ’ ಎನ್ನುವುದು ಹುಡುಕಾಟಕ್ಕೆ, ಆತ್ಮಸಾಕ್ಷಾತ್ಕಾರಕ್ಕೆ ಬಳಸುವ ಒಂದು ಪ್ರತಿಮೆ. ಭೀಮಸೇನರಲ್ಲಿ ಪ್ರಯಾಣ ಎನ್ನುವುದು ಅಕ್ಷರಶಃ ಸಂಗೀತದ ಸಾಕ್ಷಾತ್ಕಾರವೇ ಆಗಿದೆ. ಭೀಮಸೇನ ಜೋಶಿ ಹುಟ್ಟಿದ್ದು 1922ರ ಫೆಬ್ರುವರಿಯಲ್ಲಿ. ಅವರದ್ದು ಸಂಗೀತದ ಮನೆತನವಲ್ಲ. ಅಧ್ಯಯನಶೀಲತೆ ಮತ್ತು ವಿದ್ವತ್ತಿಗೆ ಹೆಸರಾದ ಮನೆ. ತಂದೆ ಗುರುರಾಜ ಜೋಶಿ ಬಹುಭಾಷಾ ಪಂಡಿತರು ಮತ್ತು ಶಿಕ್ಷಣತಜ್ಞರು. ಚಿಕ್ಕಪ್ಪ ಗೋವಿಂದಾಚಾರ್ಯರು ಪ್ರಖ್ಯಾತ ಮನೋಹರ ಗ್ರಂಥಮಾಲೆಯ ಸಂಸ್ಥಾಪಕರು.

ಎಳೆಯ ಕಿವಿಗಳಿಗೆ ಸ್ವರಗಳು ಬಿದ್ದದ್ದು ಅಮ್ಮ ಹಾಡುತ್ತಿದ್ದ ದೇವರನಾಮಗಳಿಂದ. ಮನೆಯ ಬಳಿಯ ಮಸೀದಿಯೊಂದರ ‘ಅಲ್ಲಾ ಹೋ ಅಕ್ಬರ’ ಎಂಬ ಧ್ವನಿ ಎಳೆಯ ಕಿವಿಗೆ ಬೀಳುತ್ತಿತ್ತು. ಅದನ್ನು ಕೇಳಲು ಮಸೀದಿಯಲ್ಲಿ ಕುಳಿತಿದ್ದೂ ಉಂಟು. ಒಮ್ಮೆ ಮನೆಯ ಮುಂದೆ ಹಾದುಹೋಗುತ್ತಿದ್ದ ಮದುವೆಯ ಬಜಂತ್ರಿಯ ಹಿಂದೆ ಹೋಯಿತು ಐದು ವರ್ಷದ ಮಗು.

ಶಾಲೆಯಿಂದ ಬಂದ ಕೂಡಲೇ ಭೀಮಸೇನರು ಅಣ್ಣಾ ಭೂಸದರ ಗ್ರಾಮಾಫೋನ್ ಅಂಗಡಿಯಲ್ಲಿ ಕುಳಿತು ರಾತ್ರಿಯವರೆಗೂ ಸಂಗೀತ ಕೇಳುತ್ತಿದ್ದರು. ಒಂದು ಬಾರಿ ಅಮ್ಮ ‘ಆಡಿಸಿದಳೆ ಯಶೋದಾ’ ಹಾಡುತ್ತಿದ್ದಾಗ ಅದರ ಧ್ವನಿಮುದ್ರಿಕೆ ಕೇಳಿದ್ದ ಮಗ, “ಈ ಹಾಡು ಹಿಂಗ ಅನ್ನೋದಲ್ಲ, ನಾ ಅಂದ ತೋರಸತೀನ ನೋಡು” ಅಂದ. ಅವರಿಗೆ ಸಂಗೀತ ಕಲಿಸುವಂತೆ ಪ್ರೋತ್ಸಾಹಿಸಿದವರು ಹಣಮಂತರಾವ್. ಪ್ರತಿ ಗುರುವಾರ ಅವರ ಮನೆಯಲ್ಲಿ ನಡೆಯುತ್ತಿದ್ದ ಭಜನೆಯನ್ನು ಭೀಮಸೇನ ತಪ್ಪಿಸುತ್ತಿರಲಿಲ್ಲ. ಅವರಿಗೆ ಒಂಬತ್ತು ವರ್ಷವಾಗಿದ್ದಾಗ ತಂದೆ ಅವರಿಗೆ ಹಾರ್ಮೋನಿಯಂ ಕೊಂಡುಕೊಟ್ಟರು. ಭೀಮಸೇನರ ಮೊದಲ ಗುರು ಹುಲಕೋಟಿಯ ಚನ್ನಪ್ಪನವರು, ಅವರು ಸಾಂಗಲಿಯ ಇನಾಯತ್‌ಖಾನ್ ಹಾಗೂ ಪಂಚಾಕ್ಷರಿ ಬುವಾರಿಂದ ಸಂಗೀತ ಕಲಿತಿದ್ದರು. ಅಸಾಧಾರಣ ಗ್ರಹಣಶಕ್ತಿಯ ಜೋಶಿ ಬಹುಬೇಗ ಹದಿನೈದು ಇಪ್ಪತ್ತು ರಾಗಗಳನ್ನು ಕಲಿತುಬಿಟ್ಟರು. ನಂತರ ಪಂಡಿತ ಶಾಮಾಚಾರ್ಯರಿಂದ ಗಾಯನ ಮತ್ತು ಹಾರ್ಮೋನಿಯಂ ಎರಡನ್ನೂ ಕಲಿತರು. ಇನ್ನೂ ಹೆಚ್ಚಿಗೆ ಕಲಿಯಬೇಕೆಂಬ ಬಯಕೆ ದಿನದಿಂದ ದಿನಕ್ಕೆ ಅವರಲ್ಲಿ ತೀವ್ರವಾಯಿತು.

ಬಾಲ್ಯದಲ್ಲಿ ತುಪ್ಪಕ್ಕಾಗಿ ಜಗಳವಾಡಿಕೊಂಡು ಅವರು ಮನೆ ಬಿಟ್ಟರು ಎನ್ನುತ್ತಾರೆ. ಆದರೆ ಅವರೇ ಹೇಳುವಂತೆ, “ಅದು ಕೇವಲ ನೆವ ಆಗಿತ್ತು ಅಷ್ಟೆ. ನಾನು ಮನೆ ಬಿಡುವುದು ಅಂತ ಗಟ್ಟಿಯಾಗಿ ನಿರ್ಧರಿಸಿದ್ದೆ. ನಾನು ಓಡಿಹೋಗಿದ್ದು ಗುರುವಿನ ಹುಡುಕಾಟದಲ್ಲಿ. ನನಗೆ 11 ವರ್ಷವಾಗಿದ್ದಾಗ ಉಸ್ತಾದ್ ಅಬ್ದುಲ್ ಕರೀಂಖಾನರ ‘ಪಿಯಾ ಬಿನ್ ನಹಿ ಆವತ್ ಚೈನ್’ ಎಂಬ ಧ್ವನಿಮುದ್ರಿಕೆ ಕೇಳಿದೆ. ಹಾಡಿದರೆ ಹೀಗೆ ಹಾಡಬೇಕೆಂದು ನಿಶ್ಚಯಿಸಿಕೊಂಡೆ. ನಮ್ಮ ಕಡೆ ಹೀಗೆ ಕಲಿಸುವಂತಹ ದೊಡ್ಡವರು ಯಾರೂ ಇದ್ದಿಲ್ಲ. ಅವರಿವರ ಬಾಯಲ್ಲಿ ಗ್ವಾಲಿಯರ್ ಹೆಸರು ಕೇಳಿದ್ದೆ. ಅಲ್ಲಿಗೇ ಹೋಗುವುದು ಅಂತ ಹೊರಟೆ. ಕೈಯಲ್ಲಿ ಒಂದು ಪೈಸೆ ಹಣವಿರಲಿಲ್ಲ. ಉದ್ದಕ್ಕೂ ಟಿಕೇಟಿಲ್ಲದ ಪ್ರಯಾಣ. ನಾನು ಕೆಲವು ಹಾಡುಗಳನ್ನು ಖ್ಯಾತನಾಮರು ಹಾಡಿದಂತೆಯೇ ಹಾಡುತ್ತಿದ್ದೆ. ಮಹಾರಾಷ್ಟ್ರದಲ್ಲಂತೂ ಎಲ್ಲರೂ ಸಂಗೀತಪ್ರೇಮಿಗಳು. ರೈಲಿನ ಸಂಗೀತಪ್ರೇಮಿ ಕಲೆಕ್ಟರ್‌ಗಳು ನನಗೆ ತೊಂದರೆ ಕೊಡಲಿಲ್ಲ. ಅಂತೂ ಇಂತು ಗ್ವಾಲಿಯರ್ ತಲುಪಿದೆ. ಅಲ್ಲಿ ಸುಮಾರು ಒಂದೂವರೆ ವರ್ಷ ಸರೋದ್‌ವಾದಕ ಅಮ್ಜದ್ ಅಲಿ ಅವರ ತಂದೆ ಹಾಫೀಸ್ ಅಲಿ ಅವರ ಬಳಿ ಇದ್ದೆ. ಗ್ವಾಲಿಯರ್ ಮಹಾರಾಜರು ಸಂಗೀತ ಕಲಿಯುತ್ತಿದ್ದವರಿಗೆ ಒಂದು ಹೊತ್ತಿನ ಊಟ ನೀಡುತ್ತಿದ್ದರು. ಬೆಳಿಗ್ಗೆ ಊಟ ಮಾಡಿಕೊಂಡು ಸಂಜೆ ಹೋಗಿ ಅವರ ರಿಯಾಜ್ ಕೇಳುತ್ತಿದ್ದೆ. ಪೂರಿಯಾ ಮತ್ತು ಮಾರ್ವಾ ರಾಗಗಳನ್ನು ಅವರಲ್ಲಿ ಕಲಿತೆ. ಆಗ ಯಾರೋ ಹೇಳಿದರು, ಕಲ್ಕತ್ತೆಯಲ್ಲಿ ತುಂಬಾ ಸಂಗೀತವಿದೆ ಅಂತ. ಸರಿ ಕಲ್ಕತ್ತೆಯತ್ತ ನಡೆದೆ.”

ಕಲ್ಕತ್ತೆಯಲ್ಲಿ ಖ್ಯಾತ ಗಾಯಕ ನಟ ಪಹಾಡಿ ಸೆನ್ಯಾಲ್ ಮನೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಅವರು ಸ್ಫುರದ್ರೂಪಿ ಜೋಶಿಯನ್ನೂ ಸಿನಿಮಾದಲ್ಲಿ ನಟಿಸುವಂತೆ ಕೇಳಿದರು, ಆದರೆ ಭೀಮಸೇನರ ಒಲವೆಲ್ಲಾ ಸಂಗೀತದ ಕಡೆಗಿತ್ತು. ನಂತರ